# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1097(879) |
| ಸದಸ್ಯರ ಹೆಸರು | : | ಡಾ|| ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 21-08-2025 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿ ಸಾರ್ವಜನಿಕರಿಗೆ ಟ್ಯಾಂಕರ್ ಗಳಲ್ಲಿ ನೀರು ಪೂರೈಕೆಯ ದೊಡ್ಡ ಜಾಲವೇ (ಮಾಫಿಯಾ) ಸೃಷ್ಟಿಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಈ ಜಾಲವು ತಮ್ಮದೇ ಆದ ಕೊಳವೆ ಬಾವಿಯನ್ನು ಹೊಂದಿದೆಯೇ; ಹೊಂದಿದ್ದಲ್ಲಿ, ಅವರು ಸಾರ್ವಜನಿಕರಿಗೆ ನೀರು ಪೂರೈಕೆಗಾಗಿ ಆ ಕೊಳವೆ ಬಾವಿಗಳನ್ನು ಬಳಸುತ್ತಿದ್ದಾರೆಯೇ; ಈ ರೀತಿಯ ಕೊಳವೆ ಬಾವಿ ನೀರುಗಳನ್ನು ಸಾರ್ವಜನಿಕರಿಗೆ ನೀರು ಪೂರೈಸಲು ಬಳಸುವ ಬಿಬಿಎಂಪಿಯಿಂದ ಅಧಿಕೃತ ಪರವಾನಗಿ ನೀಡಲಾಗಿದೆಯೇ; | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಈ ರೀತಿಯ ಕೊಳವೆ ಬಾವಿ ನೀರನ್ನು ಸಾರ್ವಜನಿಕರಿಗೆ ಪೂರೈಸಲು ಯಾವುದೇ ರೀತಿಯ ಅಧಿಕೃತ ಪರವಾನಗಿ ನೀಡಿರುವುದಿಲ್ಲ. |
| ಇ) | ಬೆಂಗಳೂರಿನಲ್ಲಿ ಈ ರೀತಿಯ ಜಾಲದ ಕೈಗಳಲ್ಲಿರುವ ಕೊಳವೆಬಾವಿಗಳ ಸಂಖ್ಯೆ ಎಷ್ಟು; ಈ ಎಲ್ಲಾ ಕೊಳವೆ ಬಾವಿಗಳಿಂದ ಒಂದು ದಿನಕ್ಕೆ ಎಷ್ಟು ಗ್ಯಾಲನ್ ನೀರು ತೆಗೆಯಲಾಗುತ್ತಿದೆ; ಇದನ್ನು ಸರ್ವೇ ಮಾಡಲಾಗಿದೆಯೇ; ಈ ಜಾಲವು ಸಾರ್ವಜನಿಕರಿಗೆ ಒಂದು ಟ್ಯಾಂಕರ್ ನೀರಿಗೆ ಎಷ್ಟು ದರ ನಿಗದಿ ಮಾಡಲಾಗಿದೆ; | ಅನ್ವಯಿಸುವುದಿಲ್ಲ. |
| ಈ) | ಸಾರ್ವಜನಿಕರು ಅತಿಯಾದ ಹಣ ತೆತ್ತು ಪಡೆಯುತ್ತಿರುವುದರಿಂದ ಇವರುಗಳಿಗೆ ತೊಂದರೆಯಾಗುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸಾರ್ವಜನಿಕ ಹಿತ ಕಾಪಾಡಲು ಸರ್ಕಾರ ಕೈಗೊಂಡ ಕ್ರಮವೇನು? | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಬೆಂಗಳೂರು ಜಲಮಂಡಳಿಯು ಸಾರ್ವಜನಿಕರಿಗೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡಲು ಸಂಚಾರಿ ಕಾವೇರಿ ಯೋಜನೆಯನ್ನು ದಿನಾಂಕ:09.05.2025ರಂದು ಅನುಷ್ಠಾನಗೊಳಿಸಲಾಗಿರುತ್ತದೆ. ತಮ್ಮ ಮನೆಗಳಿಂದಲೇ ಅಗತ್ಯವಿರುವ ಕಾವೇರಿ ನೀರನ್ನು ಈ ಆ್ಯಪ್ ಮೂಲಕ ನೀರಿನ ಟ್ಯಾಂಕರ್‌ಗೆ ಬೇಡಿಕೆ ನೀಡಿದ್ದಲ್ಲಿ ಅವರಿಗೆ ಜಲಮಂಡಳಿ ಟ್ಯಾಂಕರ್‌ಗಳು ಮತ್ತು ಜಲಮಂಡಳಿಯಲ್ಲಿ ನೋಂದಣಿಯಾಗಿರುವ ಖಾಸಗಿ ಟ್ಯಾಂಕರ್‌ಗಳ ಮೂಲಕ ನಿಗದಿತ ದರದಲ್ಲಿ ಕಾವೇರಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. |

**ಸಂಖ್ಯೆ:** ನಅಇ 249 ಎಂಎನ್‌ಐ 2025(ಇ)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ